ವಾರ ಬಿಟ್ಟು ಕಳ್ಳರು ಮತ್ತೊಂದು ಮನೆಗೆ ದಾಳಿಯಿಟ್ಟರು. ಈ ಮನೆಯವರು ಮಾಸ್ತರರಂತೆ ಸುಲಭಕ್ಕೆ ಮಣಿಯಲಿಲ್ಲ. ಗಾದ್ರೇಜ್ ಬೀರುವಿನ ಬೀಗದಕೈ ಎಲ್ಲೊ ಇಟ್ಟು ಸಿಗುತ್ತಿಲ್ಲ ಎಂದು ಹುಡುಕಾಡಿದರು. ಇಂತಹ ನಟನೆಯನ್ನು ಬೇಕಾದಷ್ಟು ನೋಡಿದ್ದ ಕಳ್ಳರು ಅನ್ಯಮಾರ್ಗವಿಲ್ಲದೆ ತಲಾ ಎರಡೆರಡು ಧರ್ಮದೇಟು ಕೊಟ್ಟು ಬೀಗದೆಸಳನ್ನು ಪಡೆಯಬೇಕಾಯಿತು. ಪೊಲೀಸರು ಮಹಜರಿಗೆ ಬಂದಾಗ ಮನೆಯೊಡೆಯರಿಗೆ ಕಳ್ಳರ ಚಹರೆ ವಿವರಿಸುವುದಕ್ಕೂ ತ್ರಾಸವಾಯಿತು. ಕಳ್ಳರು ಬೀಗದ ಕೈ ಪಡೆಯುವ ತವಕದಲ್ಲಿ ನಡೆಸಿದ ಮುಷ್ಟಿಕಾಳಗದಲ್ಲಿ ಅವರ ದವಡೆಗೆ ಪೆಟ್ಟಾಗಿ ಮುಖ ಬಾತುಕೊಂಡಿತ್ತು. ಅವರು ಕಾಗದದ ಮೇಲೆ ಬರೆದು ವಿದ್ಯಮಾನ ತಿಳಿಸಬೇಕಾಯಿತು. ಇದನ್ನೆಲ್ಲ ಕಂಡು ಕೇಳಿದ ಬಳಿಕ ಬಡಾವಣೆಯ ಬಗ್ಗೆ ನನ್ನಲ್ಲಿ ತುಂಬಿಕೊಂಡಿದ್ದ ಸೌಂದರ್ಯರಸವೆಲ್ಲ, ಕಲ್ಲುತಾಗಿದ ಗಡಿಗೆಯ ಜಲದಂತೆ ಬಳ್ಳನೆ ಸೋರಿ, ಭೀತಿರಸವಾಗಿ ಮಾರ್ಪಟ್ಟಿತು. ಭಾಷಣಕ್ಕಾಗಿ ಕಂಡಕಂಡ ಊರು ತಿರುಗುವ ದುರಭ್ಯಾಸವಿದ್ದ ನಾನು, ಸ್ಥಿತಿವಂತರ ಮನೆಯಲ್ಲಿ ಒಬ್ಬಳೇ ಮಗಳಾಗಿ ಹುಟ್ಟಿ ಬೆಲ್ಲದ ಗುಡಾಣದಲ್ಲಿ ಬೆಳೆದ ಮಡದಿಯನ್ನು – ಅದರಲ್ಲೂ ಎಳೆಗೂಸಿನ ತಾಯನ್ನು ಆಕೆಯ ಇಚ್ಛೆಗೆ ವಿರುದ್ಧವಾಗಿ ಕಿತ್ತುತಂದು ಬಿಸಲ ನಾಡಲ್ಲಿ ಒಗೆದಿದ್ದೆ. ಆದರೆ ಅವಳಿನ್ನೂ ಬೇರುಬಿಡುವ ಮೊದಲೇ ನೆಲದಲ್ಲಿ ಅಗ್ನಿಜ್ವಾಲೆ ಹರಡುತ್ತಿದೆ. ಪಾಪಪ್ರಜ್ಞೆ ನನ್ನ ಕೊರಳನ್ನು ಹಿಸುಕತೊಡಗಿತು. ಮನಮೆಚ್ಚಿದ ಮಡದಿ ಒಬ್ಬಳೇ ಮನೆಯಲಿದ್ದಾಗ ಕಳ್ಳರು ನುಗ್ಗಿದರೆ? ಊಹೆಯಿಂದಲೇ ಗದಗದಿಸಿದೆ. ಕಳ್ಳರು ನನ್ನ ದವಡೆಗೆ ಹೊಡೆತ ಕೊಟ್ಟರೆ ಬರೆವಣಿಗೆ ಮಾಡಿಯಾದರೂ ಬದುಕಿಯೇನು. ಆದರೆ ನನ್ನ ಪಾಠವನ್ನೇ ನೆಚ್ಚಿಕೂತಿರುವ ಶಿಷ್ಯಗಣಗಳ ಗತಿ? ನನ್ನ ಭಾಷಣಕ್ಕೆ ಚಾತಕ ಪಕ್ಷಿಗಳಂತೆ ಕಾದಿರುವ ಕನ್ನಡಿಗರ ಪಾಡು? ಭವಿಷ್ಯದಲ್ಲಿ ಅಡಗಿರುವ ದುರಂತ ಕಲ್ಪನೆಯಿಂದ ಹೈರಾಣಾಯಿತು.

ಸದ್ಯ, ಆತ್ಮರಕ್ಷಣೆಗೆ ಯಾವುದಾದರೂ ತುರ್ತುಕ್ರಮ ಕೈಗೊಳ್ಳಲೇಬೇಕಿತ್ತು. ರಾತ್ರಿ ಬೀಟ್ ಪೊಲೀಸರು ಬಂದಾಗ, 'ಸಾರ್, ನಮ್ಮದು ಕೊನೇ ಮನೆ. ಸಾಧ್ಯವಾದಷ್ಟೂ ಇಲ್ಲೇ ಅಡ್ಡಾಡ್ತ ಇರ್ರಿ' ಎಂದು ಅಹವಾಲು ಸಲ್ಲಿಸಿದೆವು. ಅದಕ್ಕವರು 'ನೋಡ್ರೀ, ನಾವು ರೂಲ್ಸ್ ಪ್ರಕಾರ ಡ್ಯೂಟಿ ಮಾಡೋರು. ರಾತ್ರೆಲ್ಲ ನಿಮ್ಮನಿ ಮುಂದ ಝೇಂಡಾ ಹಾಕ್ಕೊಂಡು ಇರಕ್ಕ ಆಗಂಗಿಲ್ಲ. ಒಂಟಿ ಮನಿ ಮಾಡೀರಿ ಅಂದರಗಿನ್ನ ಒಂದು ಗನ್ನಾದರೂ ಇಟಗೋರಿ. ನಾಯಿನಾದರೂ ಸಾಕ್ಕೋರಿ. ಕಾರದಪುಡಿ ಇಟ್ಕೊಂಡು ಕಳ್ಳರು ಬಂದಾಗ ಮುಖದ ಮ್ಯಾಲ ಒಗೀರಿ' ಎಂದೆಲ್ಲ ಸಲಹೆ ಕೊಟ್ಟರು. ಅಪ್ಪ ಸಾಯುವ ಮುನ್ನ ತನ್ನ ಪ್ರಾಣಸಮಾನವಾದ ಬಂದೂಕನ್ನು ನನ್ನ ಹೆಸರಿಗೆ ವರ್ಗಾಯಿಸ ಬಯಸಿದ್ದ. ಅಹಿಂಸಾವಾದಿಯಂತೆ ಅದನ್ನು ನಿರಾಕರಿಸಿದ ನನ್ನ ಉಡಾಫೆಯನ್ನು ನೆನೆದು ಪರಿತಪಿಸಿದೆ. ಹೊಸದಾಗಿ ಕೋವಿ ಖರೀದಿಸುವ ಬಗ್ಗೆ ಪೊಲೀಸು ಠಾಣೆಯಲ್ಲಿ ವಿಚಾರಿಸಿದೆ. ಬಂದೂಕು ಖರೀದಿಗಿರುವ ಕಟ್ಟುಪಾಡುಗಳನ್ನು ಕೇಳಿ ಇದಾಗದ ಕೆಲಸವೆನಿಸಿತು. ಒಳ್ಳೇ ಕೋವಿಯ ಬೆಲೆ ನನ್ನ ಮೂರು ತಿಂಗಳ ಸಂಬಳವನ್ನು ಬೇಡುತ್ತಿತ್ತು. ಕೋವಿ ಖರೀದಿಸಿ, ಲೈಸೆನ್ಸಿಗೆ ತಿರುಗಾಡಿ, ತರಬೇತಿ ಪಡೆದು, ಗುಂಡು ಹಾರಿಸುವುದಕ್ಕಿಂತ ಕಾರದಪುಡಿ ಎರಚುವುದು ಸುಲಭ. ಖರ್ಚೂ ಕಡಿಮೆ. ಆದರೆ ಕಾರದಪುಡಿ ಎರಚುವ ತನಕ ಸುಮ್ಮನಿರಲು ಕಳ್ಳರೇನು ಪೌಡರ್ ಹಚ್ಚಿಸಿಕೊಳ್ಳುವ ಸ್ಕೂಲುಮಕ್ಕಳೇ? ನಾಯಿ ಸಾಕುವುದೇ ವಾಸಿ. ಸಾಕುವುದಾದಲ್ಲಿ, ವಿಶ್ವವಿದ್ಯಾಲಯದ ಅಧ್ಯಾಪಕರ ಮರ್ಯಾದೆಗೆ ತಕ್ಕ ನಾಯಿಯನ್ನೇ ಖರೀದಿಸಬೇಕು. ಆದರೆ ಅದು ಎಲ್ಲಿ ಸಿಗುತ್ತದೆಯೊ ಗೊತ್ತಿಲ್ಲ.